ಸಹಸ್ರನಾಮವು ಹಾಗೂ ಪುಷ್ಪಹಾಸಃ – ಭಗವಂತನು ಹೂನಗೆಯುಳ್ಳವನೆಂದು ವಿಷ್ಣುಸಹಸ್ರನಾಮವು ವರ್ಣಿಸಿರುವಂತೆ, ಇಲ್ಲೂ ದೇವಿಯ ಮುಗುಳ್ನಗೆ ಕಾಂತಿಯುಕ್ತವಾಗಿದೆ ಎಂಬ ವರ್ಣನೆ ಇದೆ. ''ಯತೋ ವಾಚೋ ನಿವರ್ತಂತೇ ಅಪ್ರಾಪ್ಯ ಮನಸಾ ಸಹ–'' ಪರಬ್ರಹ್ಮನ ಸಾಕ್ಷಾತ್ಕಾರವಾದಾಗ ಮನಸ್ಸು, ಮಾತುಗಳು ಏನೆಂದು ಹೇಳಲಾರದೇ ಹಿಂತಿರುಗಿಬಿಡುತ್ತವೆ''– ಎನ್ನುವ ಮಾತನ್ನು, ದೇವಿಯು 'ಮಾತು. ಮನಸ್ಸುಗಳಿಗೆ ಮೀರಿದವಳು' ಎಂದು ವರ್ಣಿಸಲಾಗಿದೆ. ಸೂರ್ಯ–ಚಂದ್ರರನ್ನೇ ಕಣ್ಣಾಗ್ಗಿಯುಳ್ಳ ದೇವಿಯು; ಜಗದ್ವ್ಯಾಪಕಳಾಗಿ, ವಿಶ್ವವನ್ನೆಲ್ಲ ಸಂರಕ್ಷಿಸುತ್ತಾಳೆ, ಅವಿನಾಶಿಯಾದ ತಾಯಿಯಾಗಿರುವಳು– ಇತ್ಯಾದಿ ಹಲವು ಚಿಂತನೆಗಳನ್ನು ಈ ಸ್ತೋತ್ರವು ಭಕ್ತರ ಹೃದಯದಲ್ಲಿ ಒಡಮೂಡಿಸುತ್ತದೆ.

**ಶಿವ ಶಿವ ಪಶ್ಯಂತಿ ಸಮಂ ಶ್ರೀಕಾಮಾಕ್ಷೀಕಟಾಕ್ಷಿತಾಃ ಪುರುಷಾಃ ।**
**ವಿಪಿನಂ ಭವನಮಮಿತ್ರಂ ಮಿತ್ರಂ ಲೋಷ್ಟಂ ಚ ಯುವತಿಬಿಂಬೋಷ್ಠಮ್ ॥**

''ಶ್ರೀಕಾಮಾಕ್ಷಿದೇವಿಯು ಕೃಪಾಕಟಾಕ್ಷಕ್ಕೆ ಪಾತ್ರರಾದ ಪುರುಷರು ಕಾಡು, ಅರಮನೆ, ಶತ್ರು, ಮಿತ್ರ, ಮಣ್ಣಿನಮುದ್ದೆ, ಯುವತಿಯ ಕೆಂಪಾದ ತುಟಿ – ಹೀಗೆ ಎಲ್ಲೆಡೆ ಶಿವನನ್ನೇ ಕಾಣುತ್ತಾರೆ.''

ದೇವಿಯ ಕೃಪೆಯಾದಾಗ ಮಾತ್ರ ಅದ್ವೈತಭಾವ ಉಂಟಾಗುತ್ತದೆ. ಆಗ ಶ್ರೀಕೃಷ್ಣನು ಹೇಳಿರುವಂತೆ, **'ಶುನಿ ಚೈವ ಶ್ವಪಾಕೇ ಚ ಪಂಡಿತಾಃ ಸಮದರ್ಶಿನಃ'** – 'ನಾಯಿ, ನಾಯಿಮಾಂಸ ತಿನ್ನುವವನು – ಹೀಗೆ ಹೀನಾತಿ ಹೀನರಲ್ಲೂ ಆತ್ಮಜ್ಞಾನಿಗಳು, ಪರಮಾತ್ಮನನ್ನೇ ಕಾಣುತ್ತಾರೆ. ದೇವಿಯು ಮಾಯೆಯ ಮುಸುಕನ್ನು ಸರಿಸಿದಾಗಲೇ, ಸರ್ವಾತ್ಮ ಭಾವದ ಸಿದ್ಧಿ ಆಗುತ್ತದೆ' ಎನ್ನುವ ಉನ್ನತ ವೇದಾಂತ ತತ್ತ್ವ ಈ ಶ್ಲೋಕದಲ್ಲಿದೆ.

ಈ ಸ್ತೋತ್ರ ಅತ್ಯಂತ ಶಕ್ತಿಶಾಲಿಯಾದ ಸ್ತೋತ್ರಗಳಲ್ಲಿ ಒಂದಾಗಿದೆ. ಇದರ ಪುರಶ್ಚರಣೆಯಿಂದ ದೋಷ ದೂರವಾಗಿ, ಇಷ್ಟಾರ್ಥ ಸಿದ್ಧಿಸುತ್ತದೆ ಎಂಬ ನಂಬಿಕೆ ಇದೆ. ಕಾಮಕೋಟಿ ಪೀಠದ ಆಚಾರ್ಯರಿಗೆ ಅತ್ಯಂತ ಆಪ್ಯಾಯಮಾನವಾದ ಸ್ತೋತ್ರ ಇದಾಗಿದೆ.

**ವಿಮಲಪಟೀ ಕಮಲಕುಟೀ ಪುಸ್ತಕ ರುದ್ರಾಕ್ಷಶಸ್ತಹಸ್ತಪುಟೀ ।**
**ಕಾಮಾಕ್ಷೀ ಪಕ್ಷ್ಮಲಾಕ್ಷೀ ಕಲಿತವಿಪಂಚೀ ವಿಭಾಸಿ ವೈರಿಂಚೀ ॥ ೯೨ ॥**

''ಶ್ವೇತ ವಸ್ತ್ರಧರಿಸಿ, ಕಮಲವಾಸಿನಿಯಾಗಿ, ಮಂಗಳಕರವಾದ ಕೈಗಳಲ್ಲಿ ಪುಸ್ತಕ, ರುದ್ರಾಕ್ಷಮಾಲೆ ಹಿಡಿದುಕೊಂಡಿರುವೆ. ದಪ್ಪರೆಪ್ಪೆಗಳುಳ್ಳ ಕಮಲದ ಕಣ್ಣುಳ್ಳವಳಾಗಿ, ವಿಪಂಚಿ ಎಂಬ ವೀಣೆಯನ್ನು ಹಿಡಿದುಕೊಂಡು, ಬ್ರಹ್ಮನ ಪತ್ನಿಯಾಗಿ ಪ್ರಕಾಶಿಸುತ್ತಿರುವೆ.''

ವಿದ್ಯಾಧಿದೇವತೆಯಾದ ವಾಗೀಶ್ವರೀ ಮಾತೆಯ ಧ್ಯಾನ ಶ್ಲೋಕವಾಗಿರುವ ಈ ಸ್ತೋತ್ರವೂ ಅತ್ಯಂತ ಶಕ್ತಿಯುತವಾಗಿ ಪರಿಣಾಮಕಾರಿಯೆಂದು ಪರಿಗಣಿತವಾಗಿದೆ.

**೩) ಪಾದಾರವಿಂದ ಶತಕ, ಸ್ತುತಿಶತಕ, ಕಟಾಕ್ಷಶತಕ, ಮಂದಸ್ಮಿತ ಶತಕಗಳಲ್ಲಿನ ಸ್ತೋತ್ರಗಳಲ್ಲಿನ ಸ್ತೋತ್ರಗಳ ಪಕ್ಷಿನೋಟ:**

**ಜಪಾಲಕ್ಷ್ಮೀಶೋಣೋ ಜನನಿ ಪರಮಜ್ಞಾನನಲಿನೀ–**
**ವಿಕಾಸವ್ಯಾಸಂಗೋ ವಿಫಲಿತಜಗಜ್ಜಾಡ್ಯಗರಿಮಾ ।**
**ಮನಃ ಪೂರ್ವಾದ್ರಿಂ ಮೇ ತಿಲಕಯತು ಕಾಮಾಕ್ಷಿ ತರಸಾ**
**ತಮಸ್ಕಾಂಡದ್ರೋಹೀ ತವ ಚರಣ–ಪಾಥೋಜ–ರಮಣಃ ॥**

*(ಪಾದಾರವಿಂದ ಶತಕ–೧೭)*

''ಅಮ್ಮಾ! ಕಾಮಾಕ್ಷಿದೇವಿಯೇ! ನಿನ್ನ ಪಾದಗಳು ದಾಸವಾಳ ಪುಷ್ಪದ ಕಾಂತಿಯಂತೆ ಕೆಂಪಾಗಿವೆ. ಪರಮ ಜ್ಞಾನವೆಂಬ ಕಮಲವನ್ನು ಅರಳಿಸುವುದರಲ್ಲಿ ಮಗ್ನವಾಗಿವೆ. ಜಗತ್ತಿನಲ್ಲಿರುವ ಎಲ್ಲಾ ಜನರ ಅಜ್ಞಾನವನ್ನು ನಿವಾರಿಸಿ ಶ್ರೇಷ್ಠವಾಗಿವೆ. ಅಜ್ಞಾನದ ರಾಶಿಯನ್ನು ನಾಶಪಡಿಸುವೆ. ಅಂತಹ ನಿನ್ನ ಪಾದಕಮಲವು ನಿನ್ನನ್ನು ಪ್ರೀತಿಸುವ, ನನ್ನ ಮನಸ್ಸೆಂಬ ಪೂರ್ವ ದಿಕ್ಕಿನಲ್ಲಿರುವ ಬೆಟ್ಟವನ್ನು ಕೂಡಲೇ ಅಲಂಕರಿಸಲಿ.''(ನನ್ನ ಕಠಿನವಾಗಿರುವ ಮನಸ್ಸಿನಲ್ಲಿ, ನಿನ್ನ ಪಾದಗಳ ಸ್ಮರಣೆ ಸದಾ ಉಂಟಾಗಲಿ).

**ಪದದ್ವಂದ್ವಂ ಮಂದಂ ಗತಿಷು ನಿವಸಂತಂ ಹೃದಿ ಸತಾಂ**
**ಗಿರಾಮಂತೇ ಭ್ರಾಂತಂ ಕೃತಕ–ರಹಿತಾನಾಂ ಪರಿವೃಢೇ**
**ಜನಾನಾಮಾನಂದಂ ಜನನಿ ಜನಯಂತಂ ಪ್ರಣಮತಾಂ**
**ತ್ವದೀಯಂ ಕಾಮಾಕ್ಷಿ ಪ್ರತಿದಿನಮಹಂ ನೌಮಿ ವಿಮಲಮ್ ।**

*(ಪಾದಾರವಿಂದ ಶತಕ–೧೦೧)*

''ಅಮ್ಮಾ! ಕಾಮಾಕ್ಷಿದೇವಿಯೇ! ನಿನ್ನ ಪಾದಗಳು ಸಜ್ಜನರ ಹೃದಯದಲ್ಲಿ ಮಂದವಾದ ನಡಿಗೆಯಿಂದ ವಾಸಿಸುತ್ತಿರುವೆ. ನಿರ್ಮಲ ಹೃದಯದ ಸಂನ್ಯಾಸಿಗಳ ಮಾತುಗಳ ಅಂತ್ಯದಲ್ಲಿ ನಲಿದಾಡುತ್ತಿವೆ. ನಮಸ್ಕರಿಸುವ ಜನರಿಗೆ ಆನಂದವನ್ನು ಉಂಟುಮಾಡುತ್ತಿವೆ. ಅಂತಹ ನಿನ್ನ ಪರಿಶುದ್ಧವಾದ ಪಾದಗಳನ್ನು ಪ್ರತಿದಿನವೂ ನಾನು ನಮಿಸುತ್ತೇನೆ.''

ಫಲದಾಯಕವಾದ ಶಕ್ತಿಶಾಲೀ ಸ್ತೋತ್ರ ಇದು: *(ಸ್ತುತಿ ೧೦೧)*

**ಸಮರವಿಜಯಕೋಟೀ ಸಾಧಕಾನಂದಧಾಟೀ**
**ಮೃದುಗುಣಪರಿಪೇಟೀ ಮುಖ್ಯಕಾದಂಬವಾಟೀ ।**
**ಮುನಿನುತ–ಪರಿಪಾಟೀ ಮೋಹಿತಾಜಾಂಡಕೋಟೀ**
**ಪರಮಶಿವ–ವಧೂಟೀ ಪಾತು ಮಾಂ ಕಾಮಕೋಟೀ ॥**

*ಸ್ತುತಿಶತಕಮ್(೧೦೧)*

''ಪರಮಶಿವನ ಅರ್ಧಾಂಗಿನಿಯೇ! ನೀನು ಅಸುರರೊಡನೆ ಮಾಡಿದ ಯುದ್ಧದಲ್ಲಿ ಸದಾ ಜಯಶಾಲಿನಿಯಾಗಿರುವವಳು. ಸಾಧಕರಿಗೆ ಆನಂದವನ್ನು ಕರುಣಿಸುವವಳು. ಮೃದುಗುಣಗಳಿಂದ ತುಂಬಿರುವವಳು. ಕದಂಬವನದ ನಾಯಕಿಯಾಗಿರುವವಳು. ನಿತ್ಯವೂ ಮುನಿಗಳಿಂದ ಸ್ತುತಿಸಲ್ಪಡುವವಳು. ಬ್ರಹ್ಮಾಂಡ–ಕೋಟಿಗಳಲ್ಲಿರುವ ಎಲ್ಲರನ್ನೂ ಆಕರ್ಷಿಸುವವಳು (ಮೋಹಗೊಳಿಸುವವಳು). ಇಂತಹ ಕಾಮಕೋಟೀ ಪೀಠದ ಅಧಿಷ್ಠಾತ್ರಿಯಾಗಿರುವ ಕಾಮಾಕ್ಷಿದೇವಿ, ನೀನು ನನ್ನನ್ನು ರಕ್ಷಿಸು.''

ಫಲದಾಯಕವಾದ, ಶಕ್ತಿಶಾಲೀ ಸ್ತೋತ್ರವಿದು:

**ಪಾತೇನ ಲೋಚನರುಚೇಸ್ತವ ಕಾಮಕೋಟಿ**
**ಪೋತೇನ ಪತಕಪಯೋಧಿ-ಭಯಾತುರಾಣಾಮ್**
**ಪೂತೇನ ತೇನ ನವಕಾಂಚನ-ಕುಂಡಲಾಂಶು-**
**ವಿತೇನ ಶೀತಲಯ ಭೂಧರಕನ್ಯಕೇ ಮಾಮ್ ॥**

*( ಕಟಾಕ್ಷಶತಕಮ್ – ೧೦೧)*

''ಹೇ ಪರ್ವತರಾಜ ಪುತ್ರಿಯೇ! ಕಾಮಕೋಟಿಪೀಠದ ಅಧಿಷ್ಠಾತ್ರಿಯೇ! ಪಾಪವೆಂಬ ಸಮುದ್ರದಲ್ಲಿ ಭಯಭೀತನಾಗಿರುವ ನನ್ನ ಮೇಲೆ, ಹಡಗು ಹಾಗೂ ಸೈನ್ಯಕ್ಕೆ ಸಮಾನವಾದ ನಿನ್ನ ಕಾಂತಿಯುಕ್ತವಾದ ಕಣ್ಣಿನ ನೋಟ ಬೀಳುವಂತೆ ಮಾಡು. ನಿನ್ನ ಚಿನ್ನದ ಕುಂಡಲಗಳ ಕಿರಣಗಳಿಂದ ನನ್ನನ್ನು ಶಾಂತಗೊಳಿಸು.''

ದೇವಿಯ ಕರುಣಾಮಯವಾದ ದೃಷ್ಟಿಬಿದ್ದಾಗ, ಸಕಲ ಪಾಪಗಳೂ ನಾಶವಾಗುತ್ತವೆ. 'ದೇವಿಯು ಕಣ್ಣುಮುಚ್ಚಿದರೆ ಪ್ರಳಯ, ಕಣ್ಣುತೆರೆದರೆ ಸೃಷ್ಟಿ'–ಎಂಬ ಸೌಂದರ್ಯ ಲಹರಿಯ ಶ್ಲೋಕವನ್ನು ಈ ಸ್ತೋತ್ರ ಸ್ಮರಣೆಗೆ ತಂದು ಕೊಡುತ್ತದೆ. ಆಕೆಯಲ್ಲಿ ಶರಣಾದಾಗಲೇ ಅಂತರಂಗದಲ್ಲಿನ ಭಯಗಳು ನಾಶವಾಗಿ ಪರಮ ಶಾಂತಿಯು ಲಭಿಸುತ್ತದೆ ಎಂದು ಇಲ್ಲಿ ಸ್ತುತಿಸಲಾಗಿದೆ.

ಮೋಕ್ಷಫಲವನ್ನು ನೀಡುವ ಶಕ್ತಿಶಾಲೀ ಸ್ತೋತ್ರವಿದು:

**ಆರ್ಯಾಮೇವ ವಿಭಾವಯನ್ಮನಸಿ ಯಃ ಪಾದಾರವಿಂದಂ ಪುರಃ**
**ಪಶ್ಯನ್ನಾರಭತೇ ಸ್ತುತಿಂ ಸ ನಿಯತಂ ಲಬ್ಧ್ವಾ ಕಟಾಕ್ಷಚ್ಛವಿಮ್ ।**
**ಕಾಮಾಕ್ಷ್ಯಾ ಮೃದುಲಸ್ಮಿತಾಂ ಸುಲಹರೀ ಜ್ಯೋತ್ಸ್ನಾ ವಯಸ್ಯಾನ್ವಿತಾಂ**
**ಆರೋಹತ್ಯಪವರ್ಗ-ಸೌಧವಲಭೀಮಾನಂದ ವೀಚೀಮಯೀಮ್**

*( ಮಂದಸ್ಮಿತ ಶತಕ – ೧೦೧)*

'ಯಾವ ಮನುಷ್ಯನು ಪೂಜ್ಯಳಾದ ದೇವಿಯನ್ನು ಮನಸ್ಸಿನಲ್ಲಿ ಭಾವಿಸುತ್ತಾ, ತನ್ನ ಮುಂದೆ ಆಕೆಯ ಪಾದಕಮಲಗಳನ್ನೇ ಕಾಣುತ್ತಾ, ಉಪಾಸನೆ ಮಾಡುತ್ತಾನೋ, ನಿಯಮಬದ್ಧವಾಗಿ ಸ್ತೋತ್ರವನ್ನು ಪಠಿಸುತ್ತಾನೊ; ಆತನು ದೇವಿಯ ಕೃಪಾಕಟಾಕ್ಷಕ್ಕೆ ಪಾತ್ರನಾಗುವನು. ಆಕೆಯ ಬೆಳದಿಂಗಳಿನಂತಹ ಮುಗುಳ್ನಗೆಯ ಅಲೆಗಳಿಂದ, ಕಾಲಪಕ್ವವಾದಾಗ ಆನಂದದ ಅಲೆಗಳಿಂದ ತುಂಬಿದ ಮೋಕ್ಷವನ್ನು ಪಡೆದುಕೊಳ್ಳುವನು.'

**'ಭಾವನಾಗಮ್ಯಾಯೈ ನಮಃ '**

'ಉತ್ಕಟವಾದ ಭಕ್ತಿಯ ಭಾವದಿಂದ ಪಡೆದುಕೊಳ್ಳಲು ಸಾಧ್ಯಳಾದವಳಿಗೆ ನಮಸ್ಕಾರ' – ಎಂದು ಲಲಿತಾ ಸಹಸ್ರನಾಮದಲ್ಲಿ ಬಂದಿದೆ. ಮೂಕಕವಿಯು ಲೋಕವಿಖ್ಯಾತನಾದುದೂ ಇದೇ ಭಾವಪರವಶತೆಯ ಆರಾಧನೆಯಿಂದ. ಯಾಂತ್ರಿಕವಾದ ಪೂಜೆ, ಪಾರಾಯಣಗಳಿಂದ ದೇವಿ ಲಭ್ಯಳಲ್ಲ. ಪರಮಪ್ರೇಮಸ್ವರೂಪದ ಅಹೇತುಕೀ ಭಕ್ತಿಯಿಂದ  ಮಾತ್ರ ಭಗವಂತನ ಕೃಪೆಗೆ ಪಾತ್ರರಾಗಲು ಸಾಧ್ಯ ಎಂಬುದು ಈ ಸ್ತೋತ್ರದಲ್ಲಿ ಅಭಿವ್ಯಕ್ತವಾಗಿದೆ.

ಉತ್ಕಟವಾದ ಭಕ್ತಿಭಾವದ ಪರವಶತೆಗೆ ಮನಸ್ಸನ್ನು ಕೊಂಡೊಯ್ಯಲು, ಪಂಚಶತಕಗಳನ್ನು ಹೊಂದಿರುವ, 'ಮೂಕಪಂಚಶತೀ ಕಾವ್ಯ'ವು ದೇವಿಯೇ ಕರುಣಿಸಿರುವ ಸ್ತೋತ್ರರತ್ನ. ಪ್ರತಿನಿತ್ಯವೂ ಮಾಡುವ ಪಠನದಿಂದ ದುಷ್ಟಶಕ್ತಿಗಳು ನಾಶವಾಗಿ, ಮನಸ್ಸು ಉನ್ಮನೀ ಸ್ಥಿತಿಗೇರಲು ಸಾಧ್ಯವಾಗುತ್ತದೆ. ಪ್ರತಿಯೊಂದು ಸ್ತೋತ್ರವನ್ನು ಅರ್ಥಸಹಿತ ತಿಳಿದುಕೊಂಡಾಗಲೇ ಭಾವದ ಉದ್ದೀಪನ ಸಾಧ್ಯ. ಈ ಲಘುಲೇಖನ, ಕೇವಲ ಪರಿಚಯಾತ್ಮಕವಾದುದು. ಸಿಂಧುವಿನಿಂದ ತೆಗೆದ ಬಿಂದು ಮಾತ್ರ. ಈ ಬಿಂದುಗಳು, ಬಿಂದುಮಂಡಲವಾಸಿನಿಯಾಗಿರುವ ದೇವಿಯ ಬಗ್ಗೆ, ಭಕ್ತಭಾವವನ್ನು ಹೆಚ್ಚಿಸಲಿ. ೫೦೦ ಸ್ತೋತ್ರಗಳನ್ನೂ ಓದಲು, ದೇವಿಯು ಪ್ರೇರಣೆ ನೀಡಲಿ ಎಂದು ಪ್ರಾರ್ಥಿಸುತ್ತೇನೆ. ❁

## ಶ್ರೀಮಾತೆಯವರ ಉಪದೇಶಗಳು



* **ಭಕ್ತೆ :** ನಾನು ಎಷ್ಟೊಂದು ಜಪ, ತಪ ಮಾಡಿದೆ, ಆದರೂ ಏನೂ ಆಗಲಿಲ್ಲವಲ್ಲ?

**ಶ್ರೀಮಾತೆ :** ಅದೇನು ಹಣ ಕೊಟ್ಟು ಕೊಂಡುಕೊಳ್ಳಲು ತರಕಾರಿ, ಪಲ್ಯ, ಮೀನು ಮುಂತಾದ ವಸ್ತುವೆ?

* ಶ್ರೀರಾಮಕೃಷ್ಣರಿಗೆ ಓದುಬರಹ ಏನೂ ತಿಳಿದಿರಲಿಲ್ಲ. ಭಗವಂತನಲ್ಲಿ ಮನಸ್ಸನ್ನಿಡಲು ಮಾತ್ರ ಅವರು ಬಂದಿದ್ದರು.. ಅವರು ಈ ಬಾರಿ ಶ್ರೀಮಂತ-ಬಡವ, ಪಂಡಿತ-ಮೂರ್ಖ ಎಲ್ಲರನ್ನೂ ಉದ್ಧಾರ ಮಾಡಲು ಬಂದಿದ್ದಾರೆ. ಈಗ ಮಲಯ ಪರ್ವತದ ಗಾಳಿ ಚೆನ್ನಾಗಿ ಬೀಸುತ್ತಿದೆ. (ಮಲಯ ಪರ್ವತದ ಕಡೆಯಿಂದ ಬೀಸಿ ಬರುವ ಗಾಳಿ ಎಲ್ಲ ಮರಗಳ ತಿರುಳನ್ನೂ ಶ್ರೀಗಂಧವನ್ನಾಗಿ ಪರಿವರ್ತಿಸಿಬಿಡುವುದು ಎಂಬುದೊಂದು ನಂಬಿಕೆ.) ಯಾರು ತಮ್ಮ ಹಾಯಿಯನ್ನು ತುಸು ಬಿಡಿಸುತ್ತಾರೋ, ಭಗವಂತನಲ್ಲಿ ಶರಣಾಗತರಾಗುತ್ತಾರೋ ಅವರು ಧನ್ಯರಾಗುವರು. ಈ ಸಲ ಬಿದಿರು, ಹುಲ್ಲು ಇವನ್ನು ಬಿಟ್ಟು ಯಾವುದರ ತಿರುಳಿನಲ್ಲಿ ಒಂದಿಷ್ಟು ಸಾರವಿರುವುದೋ ಅವೆಲ್ಲ ಶ್ರೀಗಂಧವಾಗಿಬಿಡುವುದು. ನಿಮಗೇಕೆ ಚಿಂತೆ? ನೀವು ನನ್ನವರೇ. ಆದರೂ ನೋಡು, ವಿದ್ವಾಂಸ ಸಾಧುಗಳೆಂದರೆ ಚಿನ್ನದ ಕಟ್ಟು ಹಾಕಿಸಿದ ಆನೆ ದಂತದಂತೆ.

* ಮಗೂ, ನಾನು ಇನ್ನುಮುಂದೆ ಯಾರ ದೋಷವನ್ನೂ ನೋಡಲಾರೆ. ಎಲ್ಲವೂ ಅವರವರ ಪ್ರಾರಬ್ಧಕ್ಕನುಗುಣವಾಗಿ ನಡೆಯುತ್ತವೆ. ನೇಗಿಲ ಬಾಯಿ ಇರಿಯಬೇಕಾಗಿದ್ದಲ್ಲಿ ಮುಳ್ಳಾದರೂ ಚುಚ್ಚದಿದ್ದೀತೆ? ..ಜನ ಬರೀ ದೋಷವನ್ನಷ್ಟೇ ನೋಡುತ್ತಾರೆ. ಆದರೆ ಗುಣವನ್ನು ನೋಡಬೇಕು.

*('ಶ್ರೀಶಾರದಾದೇವಿ ವಚನವೇದ', ಪು. ೫೧೫-೬೬)*

# ರಾಜಾ ಭರ್ತೃಹರಿ ಮತ್ತು ಅಮರ ಫಲ

## (ಒಂದು ಪರಿವರ್ತನೆಯ ಕಥೆ)

ರಾಜಾ ಭರ್ತೃಹರಿ ನಮ್ಮ ಪರಂಪರೆಯಲ್ಲಿ ಬರುವ ಒಬ್ಬ ಶ್ರೇಷ್ಠ ವ್ಯಕ್ತಿ . ರಾಜ, ಸಂತ, ಯೋಗಿ, ವಿದ್ವಾಂಸ ಎಲ್ಲವೂ ಆಗಿದ್ದ ಅವನು ವೈರಾಗ್ಯವನ್ನು ಹೊಂದಿದ ಕಥೆ ಬಹಳ ರೋಚಕವಾಗಿದೆ.

ಒಂದು ಸಲ ಒಬ್ಬ ಭರ್ತೃಹರಿಯ ಆಸ್ಥಾನಕ್ಕೆ ಬಂದ. ಅವನು ಅತ್ಯಂತ ಅಪೂರ್ವವಾದ ‘ಅಮರ ಫಲ’ ವನ್ನು ತಂದಿದ್ದ. ಅದನ್ನು ತಿಂದರು ಅಮರರಾಗುತ್ತಾರೆ. ಅವನು ರಾಜನ ಬಳಿಗೆ ಬಂದು ಹೇಳಿದ : ‘‘ಮಹಾರಾಜ, ಇದು ಅತ್ಯಂತ ಅಪರೂಪದ ಹಣ್ಣು. ಇದರ ಹೆಸರು ‘ಅಮರಫಲ’ ಎಂದು. ಇದನ್ನು ತಿಂದವರು ಸಾಯಲಾರರು. ಆದರೆ ಈ ಹಣ್ಣು ಎಲ್ಲೂ ಸಿಗಲಾರದು, ನನಗೆ ಮಾತ್ರ ಒಂದೇ ಒಂದು ಸಿಕ್ಕಿದೆ. ಇದನ್ನು ತಿನ್ನಲು ಎಲ್ಲರಿಗಿಂತ ಹೆಚ್ಚು ಯೋಗ್ಯರು ನೀವೇ ಎಂದು ನನಗೆ ಅನ್ನಿಸಿತು. ದಯವಿಟ್ಟು ಸ್ವೀಕರಿಸಿ.’’



ರಾಜ ಅಮರಫಲವನ್ನು ಸ್ವೀಕರಿಸಿದ. ಆದರೆ ಅದನ್ನು ಇನ್ನೇನು ತಿನ್ನಬೇಕು, ಅಷ್ಟರಲ್ಲಿ ಅವನಿಗೆ ಆಲೋಚನೆ ಬಂತು, ‘ಅರೆ, ಇದನ್ನು ತಿಂದು ನಾನು ಅಮರನಾಗುತ್ತೇನೆ. ಆದರೆ ನನ್ನ ಪತ್ನಿ ನನ್ನ ಬಳಿಯಿಲ್ಲದಿದ್ದರೆ ನಾನು ಜೀವಿಸಿ ಏನು ಪ್ರಯೋಜನ? ಇದನ್ನು ಅವಳಿಗೇ ಕೊಡುತ್ತೇನೆ. ಅವಳೇ ಬದುಕಲಿ.’

ರಾಜ ಅಮರಫಲವನ್ನು ತನ್ನ ಪತ್ನಿಗೆ ಕೊಟ್ಟ. ‘‘ಇದನ್ನು ತಿಂದರೆ ನೀನು ಅಮರಳಾಗುತ್ತೀಯೆ. ನೀನು ಇದನ್ನು ತಿನ್ನು’’ ಎಂದ.

ರಾಣಿ ಹಣ್ಣನ್ನು ತೆಗೆದುಕೊಂಡಳು. ಅವಳಿಗೆ ರಹಸ್ಯವಾಗಿ ಒಬ್ಬ ಸಾರಥಿಯೊಂದಿಗೆ ಪ್ರೇಮಸಂಬಂಧವಿತ್ತು . ‘ನಾನು ಮಾತ್ರ ಬದುಕಿ, ನನ್ನ ಸಾರಥಿ ಸತ್ತುಹೋದರೆ ಏನು ಪ್ರಯೋಜನ? ಇದನ್ನು ಅವನಿಗೇ ಕೊಡುತ್ತೇನೆ. ಅವನು ಬದುಕಲಿ’ ಎಂದು ಯೋಚಿಸಿ, ಆಕೆ ಅಮರಫಲವನ್ನು ಸಾರಥಿಗೆ ಕೊಟ್ಟಳು. ಆದರೆ ವಿಧಿಯ ಆಟ ಎಂತಹುದೋ! ಸಾರಥಿಗೆ ಒಬ್ಬಾಕೆ ವೇಶ್ಯೆಯ ಮೇಲೆ ಪ್ರೇಮವುಂಟಾಗಿತ್ತು . ಅವನು ಹಣ್ಣನ್ನು ಅವಳಿಗೆ ಕೊಟ್ಟ.

ವೇಶ್ಯೆಗೆ ವಿಚಿತ್ರವಾದ ಆಲೋಚನೆ ಬಂತು. ‘ನನಗೆ ಅಮರ ಜೀವನ ಲಭಿಸಿ ಏನು ಪ್ರಯೋಜನ? ಹೆಚ್ಚುಕಾಲ ನಾನು ಬದುಕಿ ಉಳಿದಷ್ಟೂ ಹೆಚ್ಚು ಪಾಪ ಮಾಡುತ್ತೇನೆ. ನನ್ನಿಂದಾಗಿ ಇತರರೂ ಪಾಪ ಮಾಡುತ್ತಾರೆ. ಬೇರೆ ಎಲ್ಲರಿಗಿಂತಲೂ ಈ ಹಣ್ಣನ್ನು ತಿನ್ನಬೇಕಾದವನೆಂದರೆ ನಮ್ಮ ರಾಜ. ಇದನ್ನು ಅವನಿಗೇ ಕೊಡುತ್ತೇನೆ’ ಎಂದು ಭಾವಿಸಿ, ಅವಳು ಅದನ್ನು ರಾಜ ಭರ್ತೃಹರಿಗೆ ತಂದು ಕೊಟ್ಟಳು.

ರಾಜನಿಗೆ ಪರಮಾಶ್ಚರ್ಯ! ಈ ಹಣ್ಣು ಈ ವೇಶ್ಯೆಯ ಬಳಿಗೆ ಹೇಗೆ ಬಂದಿತು? ನಾನು ಇದನ್ನು ನನ್ನ ರಾಣಿಗೆ ಕೊಟ್ಟಿದ್ದೆನಲ್ಲ? ಅವನು ತನ್ನ ಗೂಢಚರರಿಗೆ ಹೇಳಿ ವಿಚಾರಿಸಿದಾಗ, ಅವನಿಗೆ ಎಲ್ಲವೂ ತಿಳಿದು ಆಘಾತವಾಯಿತು. ತನ್ನ ಪತ್ನಿಯೇ ತನಗೆ ಮೋಸ ಮಾಡಿಬಿಟ್ಟಳಲ್ಲ! ಮಾನವನು ಎಷ್ಟೊಂದು ಅಲ್ಪ ವ್ಯಕ್ತಿ ! ಕಾಮ, ಸ್ವಾರ್ಥ, ಇಂದ್ರಿಯಭೋಗಕ್ಕಾಗಿ ತನ್ನನ್ನು ಮಾರಿ ಕೊಳ್ಳುತ್ತಾನಲ್ಲ! ಇಂಥವರನ್ನು ನಂಬಿ ಮೋಸಹೋದೆ ಎಂದು ಅವನು ಪರಿತಪಿಸಿದ.

ಇದಕ್ಕೆ ಬದಲಾಗಿ, ಎಂದಿಗೂ ಮೋಸ ಮಾಡದಿರುವ, ಎಲ್ಲರಿಗೂ ಪ್ರೀತಿಪಾತ್ರನಾದ, ಎಲ್ಲರ ಒಡೆಯನಾದ ಭಗವಂತನನ್ನೇ ತಾನು ನಂಬಬೇಕು. ಅವನನ್ನು ಅವಲಂಬಿಸಿಕೊಂಡೇ ಬದುಕಬೇಕು. ಅವನನ್ನೇ ಅರಸಿಕೊಂಡು ಹೋಗಬೇಕು. ಅದಲ್ಲದೆ, ಈ ರೀತಿ ಬದುಕುವುದರಲ್ಲಿ ಯಾವ ಸಾರ್ಥಕತೆಯೂ ಇಲ್ಲ.

ಇದರಿಂದ ಭರ್ತೃಹರಿಗೆ ವೈರಾಗ್ಯ ಬಂತು. ಅವನು ಸತ್ಯವನ್ನರಸಿ ಹೊರಟ. ರಾಜ್ಯವನ್ನು ತ್ಯಾಗಮಾಡಿ, ಅವನೊಬ್ಬ ಮಹಾ ಜ್ಞಾನಿಯಾದ, ಯೋಗಿಯಾದ. ನಮ್ಮ ಸಂಸ್ಕೃತಿಯಲ್ಲಿ ಭರ್ತೃಹರಿ ಒಬ್ಬ ಶ್ರೇಷ್ಠ ದಾರ್ಶನಿಕನಾಗಿಯೂ ಪ್ರಸಿದ್ಧನಾಗಿದ್ದಾನೆ. ❋

ವಿದ್ಯಾರ್ಥಿ ಪುಟ

# ವ್ಯವಸ್ಥೆಗೊಳಿಸುವ ಕಲೆ


'ಜ್ಯೋತಿಷ್ಮತಿ'

ಪ್ರಿಯ ವಿದ್ಯಾರ್ಥಿಗಳೆ,

ಅಧ್ಯಯನ ಮಾಡುವವರಿಗೆ ಅಗತ್ಯವಾಗಿ ಇರಬೇಕಾದ ಗುಣವೇ ಎಲ್ಲವನ್ನೂ ವ್ಯವಸ್ಥಿತವಾಗಿ ಇಟ್ಟುಕೊಳ್ಳುವ, ಎಲ್ಲವನ್ನೂ ವ್ಯವಸ್ಥೆಗೆ ಒಳಪಡಿಸುವ ಗುಣ. ನಿಮ್ಮ ಕೋಣೆಯಲ್ಲಿ ಅನೇಕ ವಸ್ತುಗಳಿವೆ ಎಂದಿಟ್ಟುಕೊಳ್ಳಿ. ಶಾಲಾಪುಸ್ತಕಗಳು, ಪೆನ್, ಪೆನ್ಸಿಲ್, ಜಾಮೆಟ್ರಿ ಬಾಕ್ಸ್, ನೋಟ್ಸ್ ಕಾಗದಗಳು, ಕ್ಯಾಲ್ಕುಲೇಟರ್, ಲ್ಯಾಪ್‌ಟಾಪ್, ಬಟ್ಟೆಬರೆ, ಆಟೋಟದ ಸಾಮಗ್ರಿಗಳು, ದೈನಂದಿನ ಚಟುವಟಿಕೆಗಳಿಗೆ ಅಗತ್ಯವಾದ ಇತರ ವಸ್ತುಗಳು – ಕಾಲೊರಸುವ ಚಾಪೆ, ಕಸದ ಬುಟ್ಟಿ, ಪೀಠೋಪಕರಣಗಳು ಇತ್ಯಾದಿ. ಇವನ್ನೆಲ್ಲ ಸರಿಯಾದ ಕ್ರಮದಲ್ಲಿ , ವ್ಯವಸ್ಥಿತವಾಗಿ ಜೋಡಿಸಿ ಇಟ್ಟುಕೊಳ್ಳದಿದ್ದರೆ ಅವುಗಳ ಸರಿಯಾದ ಬಳಕೆ ಸಾಧ್ಯವಿಲ್ಲ. ವಸ್ತುಗಳು ಚೆಲ್ಲಾಪಿಲ್ಲಿಯಾಗಿ, ಎಲ್ಲೆಂದರಲ್ಲಿ ಹರಡಿದ್ದರೆ, ಇರಬೇಕಾದ ಜಾಗದಲ್ಲಿ ಇಲ್ಲದಿದ್ದರೆ ಅವುಗಳನ್ನು ಬಳಸುವುದಾದರೂ ಹೇಗೆ? ಆ ವಸ್ತುಗಳ ಉಪಯೋಗ ನಿಮಗೆ ಸಾಧ್ಯವಾಗದು, ಅವು ಇದ್ದೂ ವ್ಯರ್ಥವೆನಿಸುತ್ತವೆ. ಹುಡುಕುವುದರಲ್ಲಿ, ಪರದಾಡುವುದರಲ್ಲಿ ನಿಮ್ಮ ಸಮಯ ಕೂಡ ವ್ಯರ್ಥವಾಗುವುದು. ಉತ್ತಮ ವಿದ್ಯಾರ್ಥಿಯಾದವನು ಮಾಡುವ ರೀತಿ ಇದಲ್ಲ.

### ವ್ಯವಸ್ಥಿತಗೊಳಿಸುವ ಕಲೆ : ಹೇಗೆ?

ಮೊದಲು ನಿಮ್ಮ ಗಮನದಲ್ಲಿ ಇರಬೇಕಾದ ಸಂಗತಿ : ಇದು ನಿಜವಾಗಿ ಮನಸ್ಸಿನಲ್ಲಿ ಇರಬೇಕಾದ ಗುಣ. ನಿಮ್ಮ ಪ್ರತಿಯೊಂದು ಚಟುವಟಿಕೆ ಒಂದು ಶಿಸ್ತಿಗೆ, ಕ್ರಮಕ್ಕೆ ಒಳಗಾದಾಗ ನೀವು ಮಾಡುವ ಪ್ರತಿಯೊಂದು ಕೆಲಸಗಳೂ ವ್ಯವಸ್ಥಿತವಾಗಿರುತ್ತವೆ. ಈ ರೀತಿಯ ಮನಃಸ್ಥಿತಿಯನ್ನು ಗಳಿಸುವುದು ಹೇಗೆ? ೧) **ಕಲ್ಪನೆ:** ಎಲ್ಲವನ್ನೂ ಒಂದು ಕ್ರಮದಲ್ಲಿ ಇರುವಂತೆ ನೋಡಬೇಕು. ಯಾವುದು ಎಲ್ಲಿ , ಹೇಗೆ, ಹೆಚ್ಚು ಉಪಯುಕ್ತವಾಗಿ ಇದ್ದರೆ ಚೆನ್ನ ಎಂಬುದನ್ನು ಅಂದಾಜು ಮಾಡಿಕೊಳ್ಳಿ. ಬಳಿಕ ಅದರಂತೆ ಎಲ್ಲವನ್ನೂ ಜೋಡಿಸಿ, ಹೊಂದಾಣಿಕೆ ಮಾಡಿಕೊಳ್ಳಿ. ಸರಿ ಕಾಣಿಸದಿದ್ದರೆ ಮತ್ತೆ ಪ್ರಯತ್ನಿಸಿ. ೨) **ಚುರುಕುತನ:** ಉದಾಸೀನ ಸಲ್ಲದು. 'ಆಮೇಲೆ ಮಾಡೋಣ. ಈಗಲೇ ಏಕೆ?' ಈ ಪ್ರವೃತ್ತಿ ಸಲ್ಲದು. ಎಲ್ಲದಕ್ಕೂ ಬೇಕಾದಷ್ಟು ಸಮಯ ಇದ್ದೇ ಇರುತ್ತದೆ. ಕೋಣೆ ಸ್ವಚ್ಛಗೊಳಿಸಲು, ಎಲ್ಲವನ್ನೂ



ಜೋಡಿಸಿ ಇಟ್ಟುಕೊಳ್ಳಲು ನಿರಂತರ ಗಮನ ಕೊಡಬೇಕು. ೩) **ಉಲ್ಲಾಸ:** ಎಲ್ಲವನ್ನೂ ಕ್ರಮಗೊಳಿಸುವುದರಲ್ಲಿ ಆನಂದವನ್ನು ಕಾಣಬೇಕು. ಇಲ್ಲದಿದ್ದರೆ ಕೆಲವೇ ದಿನಗಳಲ್ಲಿ ಮತ್ತೆ ಅದೇ ಅವ್ಯವಸ್ಥೆಗೆ ಜಾರುತ್ತೀರಿ. ಎಲ್ಲವೂ ವ್ಯವಸ್ಥಿತವಾಗಿ ಇದ್ದಾಗ ಎಷ್ಟು ಚೆನ್ನಾಗಿತ್ತು ಎಂಬುದನ್ನು ಮತ್ತೆ ಮತ್ತೆ ನೆನಪಿಗೆ ತಂದುಕೊಳ್ಳಬೇಕು.

### ವ್ಯವಸ್ಥಿತಗೊಳಿಸುವುದರ ಲಾಭವೇನು?

ಎಲ್ಲವನ್ನೂ ಕ್ರಮವಾಗಿ, ವ್ಯವಸ್ಥಿತವಾಗಿ ಮಾಡುವುದರಿಂತ ಸಾಕಷ್ಟು ಸಮಯ ಉಳಿಯುತ್ತದೆ. ಏನೋ ವಸ್ತು ಕೈಗೆ ಸಿಗದೆ ಸಮಯ ಪೋಲು ಮಾಡುವುದು ತಪ್ಪುತ್ತದೆ. ಪ್ರತಿಯೊಂದೂ ಕೈಯಳತೆಯಲ್ಲೇ ಇರುವಂತೆ ಇಟ್ಟುಕೊಳ್ಳುವುದರಿಂದ ಓದು, ಬರಹ ಇತ್ಯಾದಿ ಎಲ್ಲ ಕೆಲಸಗಳೂ ಸುಗಮವಾಗಿ ನಡೆಯುತ್ತವೆ. ಮನಸ್ಸು ತಿಳಿಯಾಗಿ ಇರುವುದರಿಂದ ಓದು, ಆಲೋಚನೆ, ಮನನ ಚೆನ್ನಾಗಿ ನಡೆಯುತ್ತದೆ. ಹೀಗೆ ಮನಸ್ಸು, ಬುದ್ಧಿ ಸರಿಯಾಗಿ ಕೆಲಸ ಮಾಡಲು ಅಗತ್ಯವಾದ ಪರಿಸರ ನಿರ್ಮಾಣಗೊಳ್ಳುತ್ತದೆ.

ವಿದ್ಯಾರ್ಥಿಯು ಕೇವಲ ವಸ್ತುಗಳನ್ನು ಸರಿಯಾಗಿ ವ್ಯವಸ್ಥಿತಗೊಳಿಸಲು ಕಲಿತರೆ ಸಾಲದು. ಮನಸ್ಸಿನಲ್ಲಿ ಮೂಡುವ ಆಲೋಚನೆಗಳನ್ನೂ ಸರಿಯಾಗಿ ವ್ಯವಸ್ಥೆಗೊಳಿಸಲು ಕಲಿಯಬೇಕು. ಆಗ ಓದು, ಆಲೋಚನೆ, ನೆನಪು, ಜೀವನ ಎಲ್ಲವೂ ಸುಗಮವಾಗಿ, ವ್ಯವಸ್ಥಿತವಾಗಿ ನಡೆಯುವುದು. *